## **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

## **SC No. 41/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀಮತಿ ಮೀನಾಕ್ಷಿ** | **PW - 3** |
| ಗಂಡನ ಹೆಸರು | : | **ನಂದೀಶ** | **CW - 3** |
| ವಯಸ್ಸು | : | **42 ವರ್ಷ** | |
| ವೃತ್ತಿ | : | **ಗೃಹಿಣಿ** | |
| ವಾಸ | : | **ಹುದಿಕೇರಿ ಗ್ರಾಮ, ವಿರಾಜಪೇಟೆ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 13-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ಪ್ರಾಸಾ-1 ಅಜೆಂಡ ಪೂವಯ್ಯ ನನಗೆ ಮಾವನಾಗಬೇಕು (ಗಂಡನ ತಂದೆ), ಪ್ರಾಸಾ-2 ಸೋಮಣ್ಣ ನನ್ನ ಗಂಡನ ತಂದೆ ಇರುತ್ತಾರೆ, ಚಾಸಾ-4 ಅಕ್ಕವ್ವ ನಮ್ಮ ಅತ್ತೆ (ಗಂಡನ ತಾಯಿ) ಇರುತ್ತಾರೆ. ಆರೋಪಿತನು ನನ್ನ ಗಂಡನ ಸಹೋದರನು ಇರುತ್ತಾನೆ. ಮೃತ ನಂದೀಶ್ ನನಗೆ ಗಂಡನಾಗಬೇಕು. ನಾನು ಮತ್ತು ನನ್ನ ಗಂಡ ನಮ್ಮ ಮಾವ ನವರ ಮನೆಗೆ ಹೊಂದಿಕೊಂಡಂತೆ ಬೇರೆಯಾಗಿ ವಾಸವಾಗಿದ್ದೆವು.

2. ಕಳೆದ 1 ½ ವರ್ಷದ ಹಿಂದೆ ನಾನು ಮನೆಯಲ್ಲಿದ್ದಾಗ ರಾತ್ರಿ 8.30 ಗಂಟೆಗೆ ಶೌಚಾಲಯಕ್ಕೆ ಹೋಗುತ್ತೇನೆ ಎಂದು ನನ್ನ ಗಂಡ ಮನೆಯಿಂದ ಹೊರಗೆ ಬಂದರು, ಆಗ ನನ್ನ ಗಂಡನಿಗೆ ಆರೋಪಿ ಉತ್ತಪ್ಪ ಕತ್ತಿಯಿಂದ ತಲೆಗೆ ಕಡಿದಿರುತ್ತಾನೆ. 15 ದಿವಸದಿಂದ ಆಸ್ತಿಗಾಗಿ ಜಗಳ ನಡೆಯುತ್ತಿತ್ತು. ನನ್ನ ಗಂಡ ಆಸ್ತಿಯಲ್ಲಿ ಪಾಲು ಕೇಳಿದ್ದರು, ಆರೋಪಿತನು ಆಸ್ತಿಯಲ್ಲಿ ಪಾಲು ಕೊಡುವುದಿಲ್ಲ ಎಂದು ನನ್ನ ಗಂಡನಿಗೆ ಕಡಿದಿರುತ್ತಾನೆ. ನನ್ನ ಗಂಡನಿಗೆ ತಲೆಗೆ, ಎಡ ಭುಜದ ಹಿಂಭಾಗದಲ್ಲಿ ಗಾಯ ಆಗಿದ್ದವು. ನನ್ನ ಗಂಡ ನೆಲದ ಮೇಲೆ ಬಿದ್ದಿದ್ದರು. ನನ್ನ ಗಂಡನನ್ನು ಆಸ್ಪತ್ರೆಗೆ

ಕರೆದುಕೊಂಡು ಹೋದೆವು, 3 ದಿನ ಆದ ನಂತರ ನನ್ನ ಗಂಡ ಮೃತ ಪಟ್ಟಿರುತ್ತಾರೆ. ನಾನು ಜಗಳ ಬಿಡಿಸಿರುವುದಿಲ್ಲ. ಆ ಸಮಯದಲ್ಲಿ ಆರೋಪಿತನಿಗೂ ಗಾಯ ಆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡನ ಮೇಲೆ ಹಲ್ಲೆ ಆದ ನಂತರ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಘಟನೆ ಸಮಯದಲ್ಲಿ ಬೇರೆಯವರು ಅಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರಿಗೆ ಘಟನೆ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

1. ದಿನಾಂಕ 25.11.2023 ರಂದು ನನ್ನ ಗಂಡನು ನನ್ನ ಮಾವನ ಹತ್ತಿರ ಆಸ್ತಿಯಲ್ಲಿ ಪಾಲು ಕೊಡಿ ಎಂದು ಕೇಳಿ ಜಗಳ ಮಾಡಿದ್ದರು ಎಂದರೆ ಸರಿ ಇದೆ. ಆ ಸಮಯದಲ್ಲಿ ನಮ್ಮ ಮಾವ ನನ್ನ ಗಂಡನಿಗೆ ಸಮಾಧಾನ ಮಾಡಿದ್ದರು ಎಂದರೆ ಸರಿ ಇದೆ. ನಂತರ ಆರೋಪಿತನು ಸ್ಥಳಕ್ಕೆ ಬಂದು ಅವಾಚ್ಯವಾಗಿ ಬೈದು ನನ್ನ ಗಂಡನ ಜೊತೆ ಹೊಡೆದಾಡಿದರು ಎಂದರೆ ಸರಿ ಇದೆ. ಆಗ ಆರೋಪಿಗೆ ಸಣ್ಣ ಪುಟ್ಟ ಗಾಯ ಆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆಗ ಆರೋಪಿತನು ನಿನ್ನನ್ನು ಹೀಗೆ ಬಿಟ್ಟರೆ ಆಗುವುದಿಲ್ಲ, ನಿನ್ನನ್ನು ಸಾಯಿಸಿದರೆ ನಿನಗೆ ಪಾಲು ಕೊಡುವ ಅವಕಾಶ ಇರುವುದಿಲ್ಲ ಎಂದು ಕತ್ತಿಯಿಂದ ನನ್ನ ಗಂಡನಿಗೆ ಹಲ್ಲೆ ಮಾಡಿದ್ದರು ಎಂದರೆ ಸರಿ ಇದೆ. ನಂತರ ಆರೋಪಿತನು ಕತ್ತಿಯನ್ನು ಅಲ್ಲೆ ಬಿಸಾಡಿ ಕೋವಿ ತೆಗೆದುಕೊಂಡು ಬಂದರು ಎಂದರೆ ಸರಿ ಇದೆ. ಆಗ ನಾನು, ಸೋಮಣ್ಣ, ನನ್ನ ಮಾವ ಜಗಳ ಬಿಡಿಸಿದೆವು ಎಂದರೆ ಸರಿ ಇದೆ. ಆ ಸಮಯದಲ್ಲಿ ಪಕ್ಕದ ಮನೆಯವರಾದ ಸೂರಜ್, ಚೆಂಗಪ್ಪ ಮತ್ತು ನಾಣಯ್ಯ ಮನೆಗೆ ಬಂದರು ಎಂದರೆ ಸರಿ ಇದೆ. ಕಿತ್ತಾಟದಲ್ಲಿ ಕೋವಿ ಮುರಿದು ಹೋಗಿತ್ತು ಎಂದರೆ ಸರಿ ಇದೆ. ಕತ್ತಿ ಗುರುತಿಸಲು ಆಗುವುದಿಲ್ಲ. ಮುರಿದ ಕೋವಿಯನ್ನು ನೋಡಿದರು ಗುರುತಿಸಲು ಆಗುವುದಿಲ್ಲ.

**ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ**

1. ಘಟನೆ ದಿವಸ ನನ್ನ ಗಂಡ ಭಾಗಮಂಡಲ ಪೊಲೀಸ್ ಠಾಣೆಗೆ ಹೋಗಿ ಬಂದಿದ್ದರು ಎಂದರೆ ಸರಿ ಇದೆ. ನನ್ನ ಗಂಡನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ ಇದೆ. ಘಟನೆ ದಿವಸ ನನ್ನ ಗಂಡ ಮದ್ಯಪಾನ ಮಾಡಿದ್ದರು. ಆ ದಿನ ನನ್ನ ಗಂಡ, ಪ್ರಾಸಾ-2 ಸೋಮಣ್ಣ, ಚಾಸಾ-1 ಪೂವಯ್ಯ ಹಾಗೂ ಆರೋಪಿ ಎಲ್ಲಾ ಮನೆಯಲ್ಲೆ ಇದ್ದರು ಎಂದರೆ ಸರಿ ಇದೆ. ನನ್ನ ಗಂಡನು ಶೌಚಾಲಯಕ್ಕೆ ಹೊರಗೆ ಹೋದಾಗ ನಾನು ಮನೆಯಲ್ಲೆ ಇದ್ದೆನು, ನಂತರ ನಾನು ಹೊರಗಡೆ ಬಂದೆನು, ನಾನು ಹೊರಗಡೆ ಬಂದಾಗ ನನ್ನ ಗಂಡ ಬಿದ್ದಿದ್ದನು. ಆರೋಪಿತನು ನನ್ನ ಗಂಡನನ್ನು ತಲೆಗೆ ಮತ್ತು ಭುಜದ ಹಿಂದೆ ಕಡಿದಿದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಗೆ ವಿದ್ಯುತ್ ಸಂಪರ್ಕ ಇರುತ್ತದೆ.

2. ನನ್ನ ಗಂಡನು ಆ ದಿವಸ ಶೌಚಾಲಯಕ್ಕೆ ಮನೆಯಿಂದ ಹೊರಗೆ ಬಂದಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನನ್ನ ಗಂಡನಿಗೆ ಕತ್ತಿಯಿಂದ ತಲೆಗೆ ಮತ್ತು ಭುಜಕ್ಕೆ ಕಡಿದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂದೆ ಪಡಸಾಲೆಯಲ್ಲಿ ಸಿಮೆಂಟ್ ಕಂಬ ಇದೆ ಎಂದರೆ ಸರಿ ಇದೆ. ಸದರಿ ಸಿಮೆಂಟಿನ ಕಂಬದಲ್ಲಿ ನಾಲ್ಕು ಬದಿಯಲ್ಲಿ ಚೂಪಾಗಿದೆ ಎಂದರೆ ಸರಿ ಇದೆ. ನನ್ನ ಗಂಡನು ಆ ದಿನ ಆಯ ತಪ್ಪಿ ಬಿದ್ದು ಗಾಯಗಳನ್ನು ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ಆರೋಪಿತನು ನನ್ನ ಎದುರಿನಲ್ಲಿ ಆಸ್ತಿಯ ವಿಚಾರದಲ್ಲಿ ನನ್ನ ಗಂಡನ ಜೊತೆ ಜಗಳ ಮಾಡಿಲ್ಲ ಎಂದರೆ ಸರಿಯಲ್ಲ. ಆಸ್ತಿ ವಿಚಾರದಲ್ಲಿ ನನ್ನ ಗಂಡನಿಗೂ ಮತ್ತು ಆರೋಪಿಗೂ ಯಾವುದೇ ವಿವಾದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಆರೋಪಿ ಮಧ್ಯೆ ಆಸ್ತಿ ವಿಚಾರದಲ್ಲಿ ವಿವಾದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆರೋಪಿತನು ನನ್ನ ಗಂಡನಿಗೆ ಕತ್ತಿಯಿಂದ ಕಡಿದಿದ್ದರಿಂದ ಮೃತ

ಪಟ್ಟಿಲ್ಲ ಎಂದರೆ ಸರಿಯಲ್ಲ. ಘಟನೆ ಸಮಯದಲ್ಲಿ ನಮ್ಮ ಅತ್ತೆ ಮಾವ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅತ್ತೆ ಮಾವ ಮನೆಯ ಒಳಗಡೆ ಇದ್ದರು. ಆರೋಪಿತನ ವಿರುದ್ದ ದ್ವೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ ಮತ್ತು ಈ ಕೊಲೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.